ಓ.ಎಸ್. ನಂ. 93/2020 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 8.4.2022 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದಃ

ನಾನು ಎಂ.ಸಿ.ಎ ಪದವೀದರನಾಗಿರುತ್ತೇನೆ. ನಾನು ಕಂಪ್ಯೂಟರ್ ಪ್ರೋಗ್ರಾಮರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ರಿಯಲ್ ಎಸ್ಟೇಟ್ ಮತ್ತು ಲೇವಾದೇವಿ ಮಾಡುತ್ತೇನೆ ಎಂದರೆ ಸರಿಯಲ್ಲ. ನನಗೆ 1 ನೇ ಪ್ರತಿವಾದಿ ಗಂಡ 2013 ರಲ್ಲಿ ಪರಿಚಯವಾಗಿರುತ್ತಾರೆ. 1 ನೇ ಪ್ರತಿವಾದಿ ಗಂಡನಿಗೆ ಇಬ್ಬರು ಹೆಂಡತಿಯರು. ಮೊದಲನೇ ಹೆಂಡತಿಗೆ ಪ್ರತಿವಾದಿ 2 ಮತ್ತು 3 ರವರು ಮಕ್ಕಳಾಗಿರುತ್ತಾರೆ. ಎರಡನೇ ಹೆಂಡತಿಗೆ ಒಬ್ಬ ಮಗ ಹಾಗೂ ಮಗಳು ಇರುತ್ತಾರೆ. ದಾವಾಸ್ವತ್ತು ಸಿದ್ದೇಗೌಡ ತಂದೆ ಈರೇಗೌಡರಿಗೆ ಸೇರಿದ ಸ್ವತ್ತಾಗಿರುತ್ತದೆ ಎಂದರೆ ಸರಿ. ಅದರಲ್ಲಿ ಮಾವಿನ ತೋಟ ಇರುತ್ತದೆ ಎಂದರೆ ಸರಿ, ಆದರೆ ಅದರಲ್ಲಿ ಎಷ್ಟು ಮಾವಿನಮರ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಖಾತೆಗೆ ಸಂಬಂದಪಟ್ಟಂತೆ ಆರ್‌ಆರ್‌ಟಿ ಪ್ರಕರಣ ನಡೆದಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಓಎಸ್ 30/2010 ರಂತೆ 2 ಮತ್ತು 3 ನೇ ಪ್ರತಿವಾದಿ ಅವರ ಕುಟುಂಬದ ವ್ಯಕ್ತಿಗಳ ವಿರುದ್ಧ ವಿಭಾಗ ಕೋರಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ 25 ಮಾವಿನ ಮರ ಅಂದರೆ ಈ ದಾವಾಸ್ವತ್ತಿನ ಪೈಕಿ 1-20 ಎಕರೆ ಜಮೀನನ್ನು 2 ಮತ್ತು 3 ನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸರಿ. ಮೊದಲಿನಿಂದ ನನಗೆ ಹಾಗೂ ಸಿದ್ದೇಗೌಡ ನಡುವೆ ಹಣಕಾಸು ವ್ಯವಹಾರ ಇದೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತನ್ನು ಕಬಳಿಸುವ ದುರುದ್ದೇಶದಿಂದ ನ್ಯಾಯಾಲಯದ ಆದೇಶದಂತೆ ಖಾತೆ ಮಾಡಿಸುತ್ತೇವೆ ಎಂದು ಸಿದ್ದೇಗೌಡರವರ ಮೂಲಕ 2 ಮತ್ತು 3 ನೇ ಪ್ರತಿವಾದಿಗಳನ್ನು ಕರೆಸಿ, ಅವರಿಗೆ ತಿಳಿಯದಂತೆ ನಿಪಿ1 ನ್ನು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ.

ನನಗೆ 2 ಮತ್ತು 3 ನೇ ಪ್ರತಿವಾದಿ ವೈಯಕ್ತಿಕವಾಗಿ ಪರಿಚಯವಿರುವುದಿಲ್ಲ. ಜೂನ್ 2013 ರಲ್ಲಿ ಪ್ರತಿವಾದಿಗಳೆಲ್ಲರೂ ನನ್ನ ಬಳಿ ಬಂದು ದಾವಾಆಸ್ತಿ ಸಂಬಂಧ ಮಾತುಕತೆ ಮಾಡಿರುತ್ತಾರೆ. ಎಂದಿಗೂ ಪ್ರತಿವಾದಿಗಳು ನನ್ನ ಬಳಿ ಬಂದು ದಾವಾಸ್ವತ್ತಿನ ಸಂಬಂಧ ಮಾರಾಟ ಮಾತುಕತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿ 1-20 ಎಕರೆ ಜಮೀನಿಗೆ ಸಂಪೂರ್ಣ ಮಾಲೀಕರು ಎಂದರೆ ಸರಿ.ಅವರೇ ಸದರಿ ಸ್ವತ್ತಿನ ಸ್ವಾಧೀನ ಹೊಂದಿರುತ್ತಾರೆ ಮತ್ತು 25 ಮಾವಿನ ಮರಗಳ ಪೋಷಣೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅವರೇ ಸ್ವಾಧೀನ ಹೊಂದಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ3 ನ್ನು ನಾನು ದಿನಾಂಕ 7.10.2020 ರಂದು ನೀಡಿರುತ್ತೇನೆ ಎಂದರೆ ಸರಿ. ನಿಪಿ1 ದಿನಾಂಕ 6.1.2014 ರಂದು ಮಾಡಲಾಗಿದೆ ಎಂದರೆ ಸರಿ. ನಿಪಿ1 ರಲ್ಲಿ 3 ತಿಂಗಳ ಒಳಗಾಗಿ ಕ್ರಯಪತ್ರ ಪಡೆದುಕೊಳ್ಳಬೇಕೆಂದು ನಮೂದಾಗಿದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಪೋಡಿಯಾದ ನಂತರ 3 ತಿಂಗಳು ಎನ್ನುವರು. ನಾನು ಆರು ವರ್ಷಗಳ ನಂತರ ಈ ದಾವೆಯನ್ನು ಹೂಡಿರುತ್ತೇನೆ, ಅದು ಕಾಲ ಪರಿಮಿತಿಯಲ್ಲಿ ಇಲ್ಲದ ಕಾರಣ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ನಿರ್ದಿಷ್ಟ ಕಾಲದಲ್ಲಿ ಕ್ರಯಪತ್ರ

ಪಡೆದುಕೊಳ್ಳದೇ ಹೋದರೆ ಮುಂಗಡ ಹಣ ಮುಟ್ಟುಗೋಲು ಹಾಕಿಕೊಳ್ಳಬಹುದು ಎಂದು ನಮೂದಾಗಿದೆ ಎಂದರೆ ಸರಿ. ನಿಪಿ2 ರಂತೆ ದಾನಪತ್ರ ಆಗಿರುತ್ತದೆ, ಅಂದರೆ ದುರಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತು ದುರಸ್ತಿಯಾಗಿದ್ದರೂ ಸಹ ನಾನು ಉದ್ದೇಶಪೂರ್ವಕವಾಗಿ ಕ್ರಯಪತ್ರ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ 20 ಸಾವಿರಕ್ಕಿಂತ ಹೆಚ್ಚು ಹಣ ನೀಡಬೇಕಾದರೆ ಡಿಡಿ ಅಥವಾ ಖಾತೆ ಮೂಲಕ ವರ್ಗಾವಣೆ ಮಾಡಬೇಕು ಎಂದರೆ ಗೊತ್ತಿಲ್ಲ ಎನ್ನುವರು. ಸಿದ್ದೇಗೌಡ ನನ್ನ ಬಳಿ ಪಡೆದುಕೊಂಡ ಹಣದ ಭದ್ರತೆಗಾಗಿ ನಿಪಿ1 ನ್ನು ನಾನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2015 ರಲ್ಲಿ ಸಿದ್ದೇಗೌಡ ರವರು ಮೃತಪಟ್ಟಿರುತ್ತಾರೆ. ಸಿದ್ದೇಗೌಡ ಮತ್ತು ಅವರ ಮಗ ಸ್ವಾಮಿ ಉಃ ಗವಿ ರವರು ಜೀವಂತ ಇದ್ದಾಗ ವಕೀಲರ ಮೂಲಕ ನೋಟಿಸ್ ನೀಡಿರುವುದಿಲ್ಲ, ಮೌಖಿಕವಾಗಿ ಕೇಳಿರುತ್ತೇನೆ. ನಾನು ಲೇವಾದೇವಿ ವ್ಯವಹಾರಕ್ಕೆ ನಿಪಿ1 ನ್ನು ಪಡೆದುಕೊಂಡ ಕಾರಣ ಕ್ರಯಪತ್ರ ಪಡೆದುಕೊಳ್ಳಲು 2020 ರ ಪೂರ್ವದಲ್ಲಿ ಪ್ರತಿವಾದಿಗಳಿಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ವಾದಪತ್ರದಲ್ಲಿ ತಿಳಿಸಿದಂತೆ ಯಾವುದೇ ಹಣ ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೆ ಪ್ರತಿವಾದಿ ನಿಪಿ1 ರ ವಿಳಾಸದಲ್ಲಿ ವಾಸ ಮಾಡುತ್ತಿಲ್ಲ ಹಾಗೂ ಅವರ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾಸ್ವತ್ತು 2007 ರಲ್ಲಿ ದುರಸ್ತಿಯಾದ ಕಾರಣ ನಾನು ಹೇಳಿದಂತೆ ದಾವಾಆಸ್ತಿ ದುರಸ್ತಿಯಾಗಬೇಕಾಗಿತ್ತು, ಆ ಕಾರಣ ಕ್ರಯಪತ್ರ ಪಡೆದುಕೊಳ್ಳಲು ಆಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.